ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,ರೋಣ
(ಪೀಠಾಸಿನ ಗಜೇಂದ್ರಗಡ)
ಸಿ ಸಿ ನಂಬರ :211/2023
CW-9 PW-3

ಹೆಸರು : ಬಸವರಾಜ ನಿಡಗುಂದಿ
ತಂದೆಯ ಹೆಸರು : ಮಹಾಲಿಂಗಪ್ಪ
ವಯಸ್ಸು : 64 ವರ್ಷ
ಉದ್ಯೋಗ : ನಿವೃತ್ತ ಅಬಕಾರಿ ಉಪ ನಿರೀಕ್ಷಕರು
ವಾಸಸ್ಥಳ : ಶಿರೋಳ, ತಾಃ ನರಗುಂದ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 15-07-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ದಿಃ 27-01-2022 ರಿಂದ 28-02-2023 ರ ವರೆಗೆ ನಾನು ಅಬಕಾರಿ ಉಪನಿರೀಕ್ಷಕರು ಅಂತಾ ರೋಣ ವಲಯ ದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 21-12-2022 ರಂದು ನಾನು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-1 ರವರಿಂದ ಪಡೆದಿದ್ದೇನೆ. ದಿಃ 27-12-2022 ರಂದು ಪಿ.ಡಿ.ಓ ರಾಜೂರ ರವರಿಗೆ ಕೃತ್ಯ ನಡೆದ ಮನೆಯ ಮಾಲಿಕತ್ವದ ಕುರಿತು ಮಾಹಿತಿ ಒದಗಿಸಲು ಪತ್ರ ಬರೆದಿದ್ದೇನೆ. ದಿಃ 29-12-2022 ರಂದು ರಾಸಾಯನಿಕ ಪರಿಕ್ಷೆಗಾಗಿ ಮು.ಮಾ ವನ್ನು ಚಾಸಾ-7 ರವರ ಮುಖಾಂತರ ಧಾರವಾಡಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 31-12-2022 ರಂದು ಅವರಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿದ್ದೇನೆ. ಅದೇ ದಿನ ಚಾಸಾ-7 ರವರ ಹೇಳಿಕೆ ಪಡೆದಿದ್ದೇನೆ. ದಿಃ 04-01-2023 ರಂದು ಸದರಿ ಪಿ.ಡಿ.ಓ ರವರಿಂದ ಮನೆಯ ಮಾಲಿಕತ್ವದ ಕುರಿತು ಉತಾರೆಯನ್ನು ಪಡೆದಿದ್ದೇನೆ. ದಿಃ 05-01-2023 ರಂದು ಚಾಸಾ-4 ರಿಂದ 6 ರವರ ಹೇಳಿಕೆ ಪಡೆದಿದ್ದೇನೆ. ದಿಃ 09-01-2023 ರಂದು ಮನೆಯ ಮಾಲಿಕರಾದ 2 ನೇ ಆರೋಪಿಗೆ ನೋಟಿಸ ನೀಡಿದ್ದೇನೆ. ನಂತರ ಅವರಿಂದ ಏನು ಉತ್ತರ ಬಾರದ ಕಾರಣ ತನಿಖೆಯನ್ನು ಪೂರ್ಣಗೊಳಿಸಿ ದಿಃ 27-01-2023 ರಂದು ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ.

2. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಗೈರು ಹಾಜರು ಇರುವ ಆರೋಪಿತೋತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಅವರ ಪರ ವಕೀಲರು ನುಡಿದಿರುವರು. ಸಾಕ್ಷಿಯು ಮು.ಮಾ-1 ಎಂದು ಗುರುತಿಸಲಾದ ಒಂದು 2 ಲೀಟರ ಪ್ಲಾಸಿಕ್ ಬಾಟಲನ್ನು ನೋಡಿ ಗುರುತಿಸಿರುವರು. ಸಾಕ್ಷಿಯು ದಿಃ 29-12-2022 ರ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-5 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ-5(ಎ) ಎಂದು

ಗುರುತಿಸಲಾಯಿತು. ಸಾಕ್ಷಿಯು ಎಫ್.ಎಸ್.ಎಲ್. ವರದಿಯನ್ನು ನೋಡಿ ಗುರುತಿಸಿದ್ದು, ಆರೋಪಿತರ ವಕೀಲರ ಸಮ್ಮತಿಯ ಮೇರೆಗೆ ಅದನ್ನು ನಿ.ಪಿ-6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 09-01-2023 ರ ನೊಟೀಸಿನ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-7 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 27-12-2022 ರ ಕೊರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-8 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮನೆಯ property extract ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-9 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿಯ ಪರ ವಕೀಲರಿಂದಃ ಶ್ರೀ.BMS**

ನಾನು ಯಾವುದೇ ತನಿಖೆ ಮಾಡಿಲ್ಲ, ವರದಿಗಾಗಿ ಮು.ಮಾ ವನ್ನು ಕಳಿಸಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ, ಆರೋಪಿತರು ಯಾವುದೇ ತಪ್ಪು ಮಾಡಿಲ್ಲ, ಠಾಣಾ ಅಂಕೆ-ಸಂಖ್ಯೆ ಗೊಸ್ಕರ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮು.ಮಾ ಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ ಡಿ.)

ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ (ಪೀಠಾಸಿನ ಗಜೇಂದ್ರಗಡ)